ಕರ್ನಾಟಕ ವಿಧಾನ ಸಭೆ

ಶುಧವಾರ 4ನೇ ಮಾರ್ಚ್ 1992 ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಬೆಯ ಸಭಾಂಗಣದಲ್ಲಿ ಬೆಳಿಗ್ಗೆ11.25ಗಂಟೆಗೆ ಸಮಾವೇಶಗೊಂಡಿತು ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಸಂಪ್ರದಾಯಗಳನ್ನು ಮೀರಿ ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ. ರಾಜ್ಯದ.....

ಅಧ್ಯಕ್ಷರು:- ನಾನು ಇನ್ನೂ ಅನುಮತಿಯನ್ನು ಕೊಟ್ಟಿಲ್ಲವಲ್ಲ!

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ಅನುಮತಿಯನ್ನು ಕೇಳಿದ್ದೇನೆ. ಕಾರಣವನ್ನು ತಮಗೆ ಹೇಳುತ್ತೇನೆ.

ಅಧ್ಯಕ್ಷರು:- ಕ್ವಶ್ಚನ್ ಅವರ್ ಆದಮೇಲೆ ಇದನ್ನು ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಈಗಲೇ ನಾವು ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರಬೇಕಾಗಿದೆ.

ಅಧ್ಯಕ್ಷರು:- ಯೋಚನೆ ಮಾಡಿ ನೋಡಿ. ಸದನದ ನಿಯಮಾವಳಿಗಳು ಇವೆ.

ಶ್ರೀ ವಾಟಾಳ್ ನಾಗರಾಜ್:- ನಿಯಮಾವಳಿಗಳನ್ನು ಬಿಟ್ಟು ಹೇಳಬೇಕೆಂದು ನಮಗೆ ಉದ್ದೇಶವಿಲ್ಲ. ನಾವು ತಮ್ಮನ್ನು ತೆರೆಯಮರೆಯಲ್ಲಿ ಭೇಟಿಮಾಡಿದ್ದೇವೆ.

(ಗೊಂದಲ)

ಶ್ರೀ ಸಿ. ಬೈರೇಗೌಡ:- ರೂಲ್ಸ್, ರೆಗ್ಯುಲೇಷನ್ಸ್ ಯಾವುದೂ ಇಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನಿಯಮಗಳನ್ನೆಲ್ಲಾ ಗಾಳಿಗೆ ತೂರಿ ಈ ಸಭೆಯನ್ನು ನಡೆಸಬೇಕೆಂದು ಏನೂ ಉದ್ದೇಶ ಇಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ತಮ್ಮ ನಿಯಮಾವಳಿಗಳನ್ನು ಬಿಟ್ಟು ಹೇಳಬೇಕೆನ್ನುವ ಉದ್ದೇಶ ನಮಗಿಲ್ಲ, ತಮ್ಮನ್ನು ತೆರೆಯಮರೆಯಲ್ಲಿ ಭೇಟಿಯಾಗಿದ್ದೇವೆ. ನಿಯಮಾವಳಿಗಳನ್ನು ಗಾಳಿಗೆ ತೂರಿ ಇಲ್ಲಿ ಸಭೆಯನ್ನು ನಡೆಸಬೇಕೆನ್ನುವ ಉದ್ದೇಶ ನಮಗಿಲ್ಲ, ನಿನ್ನೆ ಈ ಆಯವ್ಯಯ ಪತ್ರ ಬಹಿರಂಗವಾಗಿರುವುದರಿಂದ ಈ ಸರ್ಕಾರ ಸಭೆಗೆ ಅಗೌರವವನ್ನು ಮಾಡಿದೆ. ಆದ್ದರಿಂದ ಈ ಸಭೆಯಲ್ಲಿ ನಾವು ಭಾಗವಹಿಸಬೇಕೋ ಬೇಡವೋ ಎನ್ನುವ ಬಗ್ಗೆ ತಮ್ಮ ಗಮನಕ್ಕೆ ತರಬಯಸುತ್ತೇನೆ.

SHRI D.B. CHANDREGOWDA :- May I submit Sir ? ನಾನು ಒಂದು ನಿರ್ಣಯವನ್ನು ಕಳುಹಿಸಿದ್ದೇನೆ.

ಶ್ರೀ ಬ್ಲೇಸಿಯನ್ ಎಂ. ಡಿಸೌಜ:- ಮಾನ್ಯ ಅಧ್ಯಕ್ಷರೇ, ಪ್ರಶ್ನೋತ್ತರಗಳು ಆಗುವುದಕ್ಕೆ ಮುಂಚೆ...

ಶ್ರೀ ಡಿ.ಬಿ. ಚಂದ್ರೇಗೌಡ:- ಆದಕ್ಕೆ ನಿಯಮಾವಳಿಗಳನ್ನು ಸಸ್‌ಪೆಂಡ್ ಮಾಡಿ ಎಂದು ನಾನು ಪತ್ರ ಬರೆದಿದ್ದೇನೆ. ರೆಸಲ್ಯೂಷನ್ ಕಳುಹಿಸಿದ್ದೇನೆ. ಆದರ ಮೇಲೆ ಡಿಸ್‌ಪ್ಯೂಸ್ ಆದಮೇಲೆ ತಾನೇ ತಾವು ಮಾತನಾಡಬಹುದು.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:- ಮಾನ್ಯ ಅಧ್ಯಕ್ಷರೇ, ಅದನ್ನು ತಮಗೆ ಬಿಟ್ಟು ಬಿಡುತ್ತೇನೆ. ಆದರೆ ಕ್ವಶ್ಚನ್ ಅವರ್ ಆಗುವುದಕ್ಕೆ ಮುಂಚೆ ಯಾವುದನ್ನೂ ನಾವು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಪ್ರಶ್ನೋತ್ತರ ಕಾಲವನ್ನು ರದ್ದು ಮಾಡಬೇಕೆಂದು ನಾವು ಈ ಸಭೆಯಲ್ಲಿ ಹೇಳುತ್ತಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ, ತಾವು ಅದಕ್ಕೆ ಅವಕಾಶವನ್ನು ಕೊಟ್ಟು ತಿಳಿದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ರಾಜುಗೌಡ:- ತಾವು ಅವಕಾಶವನ್ನು ಕೊಟ್ಟರೆ ಒಂದು ಕೆಟ್ಟ ಸಂಪ್ರದಾಯವನ್ನು ಮಾಡಿಕೊಟ್ಟಂತಾಗುತ್ತದೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಆ ಕೆಟ್ಟ ಸಂಪ್ರದಾಯ ಬೇಡವೆಂದು ಹೇಳುತ್ತೇನೆ.

ಅಧ್ಯಕ್ಷರು:- ಯಾವ ರೂಲ್ಸ್ ಪ್ರಕಾರ ಕೇಳುತ್ತಿದ್ದೀರಿ?

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು 344 ರ ಪ್ರಕಾರ ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ. ಒಂದು ರೆಸಲ್ಯೂಷನ್ ಕಳುಹಿಸಿಕೊಟ್ಟಿದ್ದೇವೆ. 145ರ ಪ್ರಕಾರ ಈ ಎರಡರ ಉದ್ದೇಶ ಸ್ವಲ್ಪ ನನಗೆ ಅವಕಾಶವನ್ನು ಕೊಟ್ಟರೆ ಬಹಳ ಒಳ್ಳೆಯದು. ತಮ್ಮ ನಿರ್ಣಯಕ್ಕೆ ನಾವು ಎಂದೂ ತಲೆಬಾಗಿದ್ದೇವೆ, ಇಂದು ತಲೆ ಬಾಗುತ್ತೇವೆ, ಮುಂದೆಯೂ ಕೂಡ ತಲೆಬಾಗುತ್ತೇವೆ ಎನ್ನುವ ಆಶ್ವಾಸನೆಯನ್ನು ಈ ಸದನಕ್ಕೂ ತಮಗೂ ಕೊಡುತ್ತಾ ಇದ್ದೇವೆ. ಮಾನ್ಯ ಅಧ್ಯಕ್ಷರೇ, ನಾನು 344ನೇ ವಿಧಿಯಂತೆ ಇಂದಿನ ಕಲಾಪಗಳನ್ನು ಓದಿ ಬಿಡುತ್ತೇನೆ. ನಿಯಮಗಳನ್ನು ತಾತ್ಕಾಲಿಕವಾಗಿ ತಡೆ ಹಿಡಿಯುವುದಕ್ಕೆ ಕಾರಣವನ್ನು ಹೇಳುತ್ತೇನೆ. ಅದನ್ನು ಸಸ್‌ಪೆಂಡ್‌ಮಾಡಿ 145ರ ಪ್ರಕಾರ ಒಂದು ರೆಸಲ್ಯೂಷನ್ನನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ. ತಮ್ಮ ಜೊತೆಯಲ್ಲಿ ಈಗಾಗಲೇ ಚರ್ಚೆಮಾಡಿದ್ದೇನೆ. ನಾನು ರೆಸಲ್ಯೂಷನ್ ಓದುತ್ತೇನೆ.

"This House resolves that the...."

ಅಧ್ಯಕ್ಷರು:-ರೆಸಲ್ಯೂಷನ್ ಓದುವುದಕ್ಕೆ ಮೊದಲು 344ನೇ ನಿಯಮವನ್ನು ನಾನು ಆಚರಣೆಗೆ ತರಬೇಕು ಎನ್ನುವುದಕ್ಕೆ ಗಹನವಾದ ಕಾರಣ ಯಾವುದು?

ಶ್ರೀ ಡಿ.ಬಿ. ಚಂದ್ರೇಗೌಡ:- ಗಹನವಾದ ಕಾರಣವನ್ನು ಹೇಳುತ್ತೇನೆ. ನಾನು ಅದಕ್ಕೆ ತಮ್ಮ ಅನುಮತಿ ಕೇಳಿದ್ದುದು. ರಾಜ್ಯದಲ್ಲಿ ಆಯವ್ಯಯಕ್ಕಿಂತ ಅತ್ಯಂತ ಗಾರವವಾದಂಥ ಮತ್ತು ಬಹಳ ಪ್ರಾಮುಖ್ಯವಾದಂಥ ವಿಷಯ ಮತ್ತೊಂದು ಇಲ್ಲವೆನ್ನುವುದನ್ನು ನಾನು ತಮಗೆ ಹೇಳಬೇಕಾದದ್ದು ಇಲ್ಲ. ತಾವು ಭಾರಿ ಅನುಭವಿ ಸಂಸದೀಯ ಪಟುಗಳು ಮಾತ್ರವಲ್ಲ, ಈ ರಾಜ್ಯದ ಮತ್ತು ಈ ದೇಶದ ಸಂಸತ್ತು ಮತ್ತು ಶಾಸನಸಭೆಗಳಲ್ಲಿ ಕೆಲಸಮಾಡಿದ ಅಪಾರವಾದ ಅನುಭವ ಪಡೆದ ತಮ್ಮಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ. ಈಗ ನಮ್ಮ ಮುಂದಿರತಕ್ಕಂಥದ್ದು, ನಾವು ಪ್ರಾಮುಖ್ಯವಾದಂಥ ವಿಧಾನ ಸಭೆ, ವಿಧಾನ ಪರಿಷತ್ತು, ಸಂಸತ್ ಈ ಮೂರು ವ್ಯವಸ್ಥೆಗೂ ಗೌರವವನ್ನು ಕಾಪಾಡತಕ್ಕಂಥದ್ದು ಮತ್ತು ಇದು ನಮ್ಮ ಆದ್ಯವಾದಂಥ ಕರ್ತವ್ಯವೂ ಆಗಿದೆ. ಈ ಕರ್ತವ್ಯಕ್ಕೆ ಲೋಪ ಬಂದಿದೆ ಎನ್ನತಕ್ಕಂಥದ್ದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಆದರೆ ಅನೇಕ ಕನ್‌ವೆನ್‌ಷನ್‌ಗಳನ್ನು ಮತ್ತು ಪ್ರಾಕ್ಟೀಸನ್ನು ತಾವು ಕ್ವೋಟ್ ಮಾಡಿ ಪ್ರಿವಿಲೇಜ ಆಗುವುದಿಲ್ಲ, ಕಂಟಿಮ್ಪ್ಟ್ ಆಫ್ ಹೌಸ್ ಆಗುವುದಿಲ್ಲವೆಂದು ನಿರ್ಣಯ ಕೊಟ್ಟಿದ್ದೀರಿ. ನಾನು ಅದನ್ನು ಪ್ರಸ್ತಾಪ ಮಾಡುವುದಕ್ಕೆ ಹೊಗುವುದಿಲ್ಲ, ಆ ಕಾರಣ, ನಾನು ತಮ್ಮಲ್ಲಿ ಇವತ್ತು ನನ್ನ ಇತಿಮಿತಿಯೊಳಗೆ, ಶಾಸನದ ಪರಿಮಿತಿಯೊಳಗೆ ಕೆಲಸ ಮಾಡುವುದಕ್ಕೆ, ಇಂಥ ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ನನಗೆ ಇರತಕ್ಕ ಅಡ್ಡಿ ತೊಂದರೆಗಳನ್ನು ನಾನು ತಮಗೆ ನಿವೇದನೆ ಮಾಡಿದ್ದೇನೆ. ಆದುದರಿಂದ ನಾನು ತಮ್ಮ ಅನುಮತಿ ಕೇಳುತ್ತಿದ್ದೇನೆ. ಈ ಬಗ್ಗೆ ನಿನ್ನೆ ವಿಸ್ತಾರವಾಗಿ ಚರ್ಚೆಯಾದ ಕಾರಣ ಹಿಂದೆ ಹೊಗುವುದಕ್ಕೆ ಅವಕಾಶ ಇಲ್ಲವೆಂಬ ದೃಷ್ಟಿಯಿಂದ ತಾವು 344ನೇ ನಿಯಮದ ಪ್ರಕಾರ ಪ್ರಶ್ನೋತ್ತರ ಕಾಲವನ್ನು ಸ್ಥಗಿತಗೊಳಿಸಿ ನಾನು ಕೊಟ್ಟರತಕ್ಕ...

(ಮಾನ್ಯ ಆಹಾರ ಸಚಿವರು ಮಧ್ಯೆ ಏನೋ ಮಾತನಾಡಿದರು)

ಶ್ರೀ ಡಿ.ಬಿ. ಚಂದ್ರೇಗೌಡ:- ಇದುವರೆಗೆ ಹೇಳಿದೆನಲ್ಲ, ಇದೇನು ಆಹಾರ ಇಲಾಖೆ ಅಲ್ಲ.

Mr. Speaker:- I have caught the spirit of what you are saying. Let me respond to you.

ಶ್ರೀ ಡಿ.ಬಿ. ಚಂದ್ರೇಗೌಡ:- ನಾನೇನು ಟೆಕ್ನಿಕಲ್ ಪ್ರಶ್ನೆಯನ್ನು ತಂದಿಲ್ಲ, ಪ್ರೋಸೀಜರಲ್ ವಿಚಾರವನ್ನು ತಂದಿಲ್ಲ, ಪ್ರಶ್ನೆ ಏನೆಂದರೆ, ಇಡೀ ಸದನದ ಮತ್ತು ಸದಸ್ಯರ ಒಂದು ಗೌರವದ ಪ್ರಶ್ನೆ. ಈ ಒಂದು ಗೌರವದ ಪ್ರಶ್ನೆಯನ್ನು

ಎತ್ತಿಹಿಡಿಯುವುದಕ್ಕಾಗಿ, ನಾನು ತಮಗೆ ಋಣಿಯಾಗಿದ್ದೇನೆ. ಇವತ್ತು ಸಂಪ್ರದಾಯಗಳಿಗೆ ಧಕ್ಕೆ ಬಂದಿದೆ; ಈ ಸಂಪ್ರದಾಯಗಳಿಗೆ ತಿಲಾಂಜಲಿ ಕೊಡುವಂಥ ಪ್ರವೃತ್ತಿ ಬೆಳೆದರೆ ಈ ಒಂದು ಸಂಸ್ಥೆ ತನ್ನ ಕ್ರೆಡಿಬಿಲಿಟಿಯನ್ನು ಕಳೆದುಕೊಳ್ಳುತ್ತದೆಂಬ ದೃಷ್ಟಿಯಿಂದ ತಾವು ಹೇಳಿದ ಹಾಗೆ ಈ ಸಂಪ್ರದಾಯಗಳು ಮುರಿಯಬಾರದು ಎನ್ನುವ ದೃಷ್ಟಿಯಿಂದ ನಾನು ಕೆಲವು ಸಲಹೆಗಳನ್ನು ತಮಗೆ ಕೊಡಬಯಸುತ್ತೇನೆ. ಆ ದೃಷ್ಟಿಯಿಂದ 344ನೇ ನಿಯಮವನ್ನು ತಾತ್ಕಾಲಿಕವಾಗಿ ಬಿಟ್ಟು ಪ್ರಶ್ನೋತ್ತರ ಕಾಲವನ್ನು ರದ್ದು ಮಾಡಿ ನಾನು ಕೊಟ್ಟಿರತಕ್ಕ ರೆಸೊಲ್ಯೂಷನ್ ಏನಿದೆ ಅದನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡಿ. ತಮ್ಮ ನಿರ್ಣಯಕ್ಕೆ ನಾನು ತಲೆ ಬಾಗುತ್ತೇನೆ. ನಾನು ಎಂದೂ ತಮ್ಮ ನಿರ್ಣಯವನ್ನು ಪ್ರಶ್ನೆ ಮಾಡುವುದಿಲ್ಲ. ನಾನು ಈ ರೆಸಲ್ಯೂಷನ್ ಕಳುಹಿಸುವುದಕ್ಕೆ ಕಾರಣ ಹೇಳಿದ್ದೇನೆ. ನಮಗೆ ಇರತಕ್ಕ ಇತಿಮಿತಿಯೊಳಗೆ ಕಂಟಿಮ್ಪ್ ಆಫ್ ದಿ ಹೌಸ್, ಪ್ರಿವಿಲೇಜ್ ಮತ್ತೊಂದು ಸಾಧ್ಯವಿಲ್ಲವೆಂದು ತಾವು ಅಭಿವ್ಯಕ್ತ ಮಾಡದಿದ್ದರೂ ಆ ಅರ್ಥ ಬರುವ ಹಾಗೆ ನಿನ್ನೆ ಹೇಳಿರುವುದರಿಂದ ಪುನಃ ಆ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಹೋದರೆ ಅಪ್ರಸ್ತುತವಾಗುತ್ತದೆ, ಮಿತ್ರರು ಹೇಳಿದಂತೆ ಸಂಪ್ರದಾಯಕ್ಕೆ ವಿರುದ್ಧವಾಗುತ್ತದೆಂದು ಭಾವಿಸಿ, ನಿನ್ನೆ ಆಯವ್ಯಯ ಮಂಡನೆ ಮಾಡತಕ್ಕ ಸಂದರ್ಭದಲ್ಲಿ ನಡೆದ ಪ್ರಕರಣಗಳು ವಿಶೇಷವಾಗಿ.....

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ತಾವು ಅವರಿಗೆ ವಿಷಯವನ್ನು ಮಂಡನೆ ಮಾಡುವುದಕ್ಕೆ ಅವಕಾಶ ಕೊಡುವುದಿದ್ದರೆ ನಾನು ಅಡ್ಡ ಬರುವುದಿಲ್ಲ. ಅವರು ಅದನ್ನು ಪ್ರಶ್ನೋತ್ತರಗಳು ಮುಗಿದ ಮೇಲೆ ಪ್ರಸ್ತಾಪ ಮಾಡಿದರೆ ಒಳ್ಳೆಯದು. ತಾವು ವಿಷಯ ಮಂಡನೆಗೆ ಅನುಮತಿ ಕೊಟ್ಟಿದ್ದು ಅವರು ಹೇಳಿದರೆ ಒಳ್ಳೆಯದಾಗುತ್ತದೆ.

(ಏಕಕಾಲದಲ್ಲಿ ಉಭಯ ಸದಸ್ಯರೂ ಮಾತನಾಡತೊಡಗಿದರು)

(ಗೊಂದಲ)

SHRI D.B. CHANDRE GOWDA:- Let me read my resolution.

(INTERRUPTIONS)

SHRI D.B. CHANDRE GOWDA:- Please permit me to read the resolution.

(INTERRUPTIONS)

SHRI D.B. CHANDRE GOWDA:- Please permit me to place my views.

MR. SPEAKER:- I would like to have the benefit of advice of the Law Minister.

SHRI BLASIUS D'SOUZA:- Mr. Speaker, we are deviating from the ordinary procedures. Normally we have the Question Hour. Before that the Hon'ble leader of Opposition is raising something. You have already given a ruling yesterday. The budget is also presented. I don't think anybody has got a right to speak about what happened yesterday and to give an opportunity now at this stage, I don't think it is correct because once we deviate from the rules, before the Question Hour if any of the hon. members wants to speak, if it is urgent to speak , he could bring it up after the Question Hour, not before the Question Hour.

(INTERRUPTIONS)

DR. SPEAKER:- To add to the Law Minister's voice, after all, all that we are seeking from you is to wait for one hour; let the Queston Hour be over.

(INTERRUPTIONS)

MR. SPEAKER:- Why should we suspend it, tell me. What is it the House is going to gain by that?

SRI D.B. CHANDRE GOWDA:- The Law Minister has raised two things. One is the question of budget and the other is the procedure. So far as the budget is concerned, my submission is, even under the rule of financial business of the Lok Sabha, which is synonymous with the rule 176 of this House, that after the presentation of the Budget, you have not permitted us yet to open the debate. It is well within rule 176 - General Discussion on the Budget.

"On a day or days to be appointed by the Speaker subsequent to the day on which the Budget is presented and for such time as the Speaker may allot for this purpose, the House shall discuss the Budget as a whole or any question of principle involved therein, but no motion shall be moved nor shall the Budget be submitted to the vote of the House."

Therefore, you have not fixed the time yet for the General Discussion on the Budget. Under 176, it is well within your right, duty cast upon you to fix the time for the Budget.

ಬಜೆಟ್ ಪ್ರಸ್ತಾಪಕ್ಕೆ ಅಧ್ಯಕ್ಷರು ಇನ್ನೂ ಅನುಮತಿ ಕೊಟ್ಟಿಲ್ಲ, ಆದ್ದರಿಂದ ಬಜೆಟ್ಟನ್ನು ಚರ್ಚೆ ಮಾಡತಕ್ಕ ಪ್ರಶ್ನೆಯೇ ನಮ್ಮ ಮುಂದೆ ಇಲ್ಲ,

We called it an illegal budget. We have called it a secondary budget. Therefore, my submission is that this rule is synonymous with the Lok Sabha rule 207, which states:-

"On a day or days to be appointed by the Speaker subsequent to the day on which the Buudget is presented and for such time as the Speaker may allot for this purpose,..."

Therefore, ಬಜೆಟ್ ಚರ್ಚೆ ಪ್ರಾರಂಭವಾಗಿಲ್ಲ, ತಾವು ತಪ್ಪು ತಿಳಿದುಕೊಳ್ಳಬೇಡಿ. ಆ ಕಾರಣ ನಾವು ಈ ಬಜೆಟನ್ನು ಚರ್ಚೆ ಮಾಡುವುದಕ್ಕೆ ನಾವು ಸಿದ್ಧರಿಲ್ಲ, ಏತಕ್ಕೆ ಸಿದ್ಧರಿಲ್ಲ ಎಂಬುದನ್ನು....

SRI BLASIUS M. D'SOUZA : Point of order. We have the agenda given by you. It is mentioned here 'Genaral Discussion on the Budget for the year 1992-93.'

SRI D.B. CHANDRE GOWDA :- Therefore the day's agenda not only includes Questions Hour but includes Discussion on the Budget also. That agenda, I do not know how it is issued, because the time is not yet fixed by you under rule 176. The very agenda is in question. It is ineumbent on the part of the Speaker to fix the time under 176, after the Budget is presented.

ಶ್ರೀ ಆರ್.ಎನ್. ನಾಯಕ್:- ಅಧ್ಯಕ್ಷರೇ, ಅಜೆಂಡ ಯಾರು ಇಷ್ಯೂ ಮಾಡಿದರು ಅವರಿಗೆ ಅದು ಗೊತ್ತಿತ್ತೇ ಇಲ್ಲವೇ ?

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ನಿಮ್ಮಿಂದ ಕಲಿಯಬೇಕೇ ಸ್ವಾಮಿ ರೂಲ್ಸ್? ಸ್ವಲ್ಪ ತಿಳಿದುಕೊಳ್ಳಿ. I have not yielded. I am submitting to the Speaker.

ಶ್ರೀ ಆರ್.ಎನ್. ನಾಯಕ್:- ಏನು ಹೇಳಿದಿರಿ? ನೀವು ದೊಡ್ಡವರು. ನೀವು ಯಾರಿಂದ ಕಲಿಯುವುದೂ ಬೇಕಾಗಿಲ್ಲ, ತಾವು ಸರ್ವಜ್ಞರು ಇರಬಹುದು. ನಾನಂತೂ ಸರ್ವಜ್ಞ ಅಲ್ಲ, ನಾನು ಎಲ್ಲರಿಂದ ಕಲಿಯುವುದಕ್ಕೆ ಇಲ್ಲಿ ಬಂದಿದ್ದೇನೆ. ಈಗ ಅಜೆಂಡಾ ಇಷ್ಯೂ ಆಗಿದೆ. ಚರ್ಚೆ ಪ್ರಾರಂಭ.....

ಶ್ರೀ ಡಿ.ಬಿ. ಚಂದ್ರೇಗೌಡ:- ಒಬ್ಬ ಸದಸ್ಯರು ಮಾತನಾಡುವಾಗ ಇನ್ನೊಬ್ಬರು ಏಳಬಾರದು. ಇದು ಮೊದಲನೆಯ ಬೇಸಿಕ್ ವಿಚಾರ.

(ಗೊಂದಲ)

ಶ್ರೀ ಆರ್. ಎನ್. ನಾಯಕ್ :-ಬಜೆಟ್ ಚರ್ಚೆ ಎಂದು ಅಜೆಂಡಾದಲ್ಲಿದೆ. ಅದಕ್ಕಾಗಿ ನಾವು ಬಂದಿದ್ದೇವೆ. ನೀವು ಏತಕ್ಕೆ ಬಂದಿದ್ದೀರಿ? ಅದಕ್ಕೆ ಬಂದಿದ್ದಲ್ವಾ?

SRI D.B. CHANDRE GOWDA :- The agenda is...

MR. SPEAKER :- Questions.

ಶ್ರೀ ಡಿ.ಬಿ. ಚಂದ್ರೇಗೌಡ:- ಫೈನಾನ್‌ಷಿಯಲ್ ಬಿಸಿನೆಸ್ ಕೂಡ ಇದೆ ಸಾರ್. ನನ್ನ ಸಬ್‌ಮಿಷನ್ ಏನು? ತಾವು ಬಜೆಟ್ ಡಿಸ್ಕಷನ್.....

ಶ್ರೀ ಆರ್. ಎನ್. ನಾಯಕ್:- ತಾವು ಕ್ವಶ್ಚನ್ ಅವರ್ ಬೇಡ ಎಂದು ಹೇಳುತ್ತೀರೋ? ಏನಾದರೂ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ :- ತಾವು ಸಮಯವನ್ನು ನಿಗದಿ ಮಾಡಿಲ್ಲ, ನಿಯಮ 176ರ ಪ್ರಕಾರ. ಆದ್ದರಿಂದ Financial Business- General Discussion on the Budget. ಈ ದಿವಸ ಮಾಡುವುದಕ್ಕೆ ಸಾಧ್ಯವಿಲ್ಲ. Therefore, my submission is the entire business is not in order. ಆ ಕಾರಣಕ್ಕೆ ಏನು ತಾವು ನಿಯಮ 344ರಂತೆ ಪ್ರಶ್ನೋತ್ತರ ವೇಳೆ ನಡೆಸಿ ಆಮೇಲೆ ನನ್ನ ಕೆಲವು ಆನಿಸಿಕೆಗಳನ್ನು ಹೇಳುವುದಕ್ಕೆ ಅವಕಾಶ ಕೊಡಿ. ಆಮೇಲೆ I leave it to you. I always submitted to your decision. Therefore, my submission is, ನಾನು ಒಂದು ರೆಸಲ್ಯೂಷನ್ ಕಳುಹಿಸಿದ್ದೇನೆ. ಅದನ್ನು ನಾನು ಆಗಲೇ ತಮ್ಮ ಗಮನಕ್ಕೆ ತಂದಿದ್ದೇನೆ. ಅದರಲ್ಲಿ ಬಹಳ ಹೇಳಿಲ್ಲ, ಇಲ್ಲದೇ ಇರುವ ವಿಚಾರಗಳನ್ನು ಹೇಳುವುದಿಲ್ಲ, ರೆಸಲ್ಯೂಷನ್ನನ್ನು 145ನೇ ಕ್ಲಾಸ್‌ಗೆ ಕಳುಹಿಸುತ್ತಾ "This House resolves...."

MR. SPEAKER :- You don't have to go into resolution right now.

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ಇನ್ನೊಂದು ಕೇಳಿದ್ದೇನೆ. ರೂಲ್ 145ರ ಕೆಳಗೆ 7 ದಿನಗಳ ನೋಟೀಸ್ ಕೊಡಬೇಕೆಂದು ಇದೆ. ತಾವು ಅದನ್ನು ಕಂಡೋನ್ ಮಾಡಿ ಎಂದು ಹೇಳಿದ್ದೇನೆ.

ಅಧ್ಯಕ್ಷರು :- ನಾವು ಆ ಹಂತಕ್ಕೆ ಇನ್ನೂ ಹೋಗಿಲ್ಲ, ನಾವು ಇನ್ನೂ 344ರಲ್ಲೇ ಇದ್ದೇವೆ. I am just debating within myself whether I should allow you to proceed any further or I should get back to the Order Paper of the day. I am still at that stage.

SRI. D.B. CHANDREGOWDA :- I am not questioning your...(Interruptions). Rightly or wrongly you have decided that the Budget Discussion should take place to-day.

(Interruptions)

ಶ್ರೀ ಆರ್.ಎನ್. ನಾಯಕ್ :- ಅಧ್ಯಕ್ಷರೇ, ತಾವು ಪ್ರಶ್ನೋತ್ತರ ವೇಳೆ ಇಲ್ಲ ಎಂದು ಹೇಳಿದ್ದೀರೋ ಹೇಗೆ? ತಾವು ಅನುಮತಿ ಕೊಟ್ಟರೆ ಅವರು ಮಾತನಾಡಬಹುದು. ಪ್ರಶ್ನೋತ್ತರ ವೇಳೆ ಇಲ್ಲ ಎಂದು ತಾವು ಹೇಳಬೇಕಾಗುತ್ತದೆ. ಕ್ವಶ್ಚನ್ ಅವರ್ ಮುಂದೆ ಹೋಗಿದೆ ಎಂದರೆ ಅವರು ಮಾತನಾಡಬಹುದು. ತಾವು ಹೇಳಿಲ್ಲ ಎಂದರೆ ಅವರು ಕುಳಿತುಕೊಳ್ಳಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು :- ಸಿದ್ದನಗೌಡರೇ, ನೀವು ನಿನ್ನೆ ಬಂದಿರಲಿಲ್ಲ, ಪಾಪ, ತಮಗೆ ವಿಷಯ ಗೊತ್ತಿಲ್ಲ, ತಾವು ಕುಳಿತುಕೊಳ್ಳಿ. ಪೋಟಮ್ಮನವರು ನಿನ್ನೆ ಇದ್ದರು. ಅವರಷ್ಟು ನಾನು ಕರೆಯುತ್ತೇನೆ.

ಶ್ರೀಮತಿ ಮೋಟಮ್ಮ:- ನಮ್ಮ ಪ್ರಶ್ನೆಗಳು ಲಾಟರಿಯಲ್ಲಿ ಬರುತ್ತವೆ. ಇವತ್ತು ನನ್ನ ಪ್ರಶ್ನೆಗ ಲಾಟರಿಯಲ್ಲಿ ಅವಕಾಶ ಸಿಕ್ಕಿದೆ. ಟೈಮ್ ಲಾಸ್ ಆದರೆ ಲಾಟರಿಯಲ್ಲೂ ಲಾಸ್ ಆಗುತ್ತದೆ. ದಯಮಾಡಿ ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಇದು ಅತ್ಯಂತ ವಿಶೇಷವಾದ ಪರಿಸ್ಥಿತಿ. ಆಯವ್ಯಯ ಪತ್ರ....

(ಗೊಂದಲ)

MR. SPEAKER :- After the Question Hour, I will give you any number of....

ಶ್ರೀ ವಾಟಾಳ್ ನಾಗರಾಜ್:- ನಾನು ತಂದಿರತಕ್ಕ ನಿರ್ಣಯವನ್ನು ಮಂಡಿಸುವುದಕ್ಕೆ ಅವಕಾಶ ಮಾಡಿಕೊಡ ಬೇಕೆಂದು ಹೇಳುತ್ತೇನೆ.

(ಗೊಂದಲ)

ಶ್ರೀ ಆರ್.ಎನ್. ನಾಯಕ್:- ತಾವು ಹೇಳಿದರೆ ಮಾತ್ರ ಪ್ರಶ್ನೋತ್ತರ ವೇಳೆ ಮುಂದೆ ಹೋಗುತ್ತದೆ. ಇಲ್ಲಿ ಎಲ್ಲರೂ ಎದ್ದು ಎದ್ದು ಮಾತನಾಡುತ್ತಿದ್ದಾರೆ. ಎಲ್ಲರಿಗೂ ತಾವು ಕುಳಿತುಕೊಳ್ಳುವುದಕ್ಕೆ ಆರ್ಡರ್ ಕೊಡಬೇಕು.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ಮತ್ತೊಂದು ಪ್ರಶ್ನೆ ಎಂದರೆ ಇವತ್ತು ಪ್ರಶ್ನೋತ್ತರ ಪಟ್ಟಿಯಲ್ಲಿ ಮೊದಲನೇ ಪ್ರಶ್ನೆ ಬೇಡ್ತಿ ಯೋಜನೆಗೆ ಸಂಬಂಧಪಟ್ಟಿದ್ದುದು ಆಗಿದೆ. ಅದಕ್ಕೆ ಹಣ ಖರ್ಚು ಆಗಬೇಕು. ಹಣ ಎಲ್ಲಿಂದ ಬರುತ್ತದೆ? ಬಡ್ಜೆಟ್‌ನಿಂದ ಬರುತ್ತದೆ.

ಅಧ್ಯಕ್ಷರು:- ಇಲ್ಲ.

ಶ್ರೀ ಸಿ. ಬೈರೇಗೌಡ:- ಆಫಿಶಿಯಲ್ ಸೀಕ್ರೆಟ್ ಆಕ್ಟ್ ಪ್ರಕಾರ ಏನಿದೆ ಎಂದರೆ ಮಂತ್ರಿಗಳಾಗಿರತಕ್ಕವರು ಆಗತ್ಯ ಇರತಕ್ಕ ಸಂದರ್ಭದಲ್ಲಿ ಅಲ್ಲದೇ ಬೇರೆ ಸಂದರ್ಭದಲ್ಲಿ ನಾನು...

(ಗೊಂದಲ)

ಅಧಿಕಾರ ಗೌಪ್ಯತೆ ಪ್ರಮಾಣವಚನವನ್ನು ಸ್ವೀಕಾರ ಮಾಡಿದ್ದೇವೆ. ಇವತ್ತಿನದಿವಸ

(ಗೊಂದಲ)

ಬಡ್ಜೆಟ್ಗೆ ಮಾನ್ಯತೆ ಏನು ಇದೆಯೋ ಅದು ಹೋಗಿದೆ. ಅಂತಹದ್ದು ಚರ್ಚೆ ಮಾಡಿದರೆ ಇವತ್ತಿನದಿವಸ... ಇವತ್ತಿನ ದಿವಸ ಪ್ರತಿಯೊಂದು ಪ್ರಶ್ನೆಯಲ್ಲೂ ಕೂಡಾ ಹಣಕಾಸಿನ ವ್ಯವಸ್ಥೆ ಇದೆ. ಹಣಕಾಸಿನ ವ್ಯವಸ್ಥೆ ಬಗ್ಗೆ ಪ್ರಶ್ನೆ ಮಾಡುತ್ತಾ ಹೋದರೆ ಸರಿಯಿಲ್ಲ.

SRI D.B. CHANDRE GOWDA:- I think I have got the right to..

MR. SPEAKER:- I will give my most serious consideration to safeguard your right to say whatever you feel like, but at a time when I choose.

ಶ್ರೀ ಹೆಚ್. ಏಕಾಂತಯ್ಯ:- ಪ್ರಶ್ನೋತ್ತರ ಅವಧಿ ತಮ್ಮ ನಿಯಮದ ಪ್ರಕಾರ ಒಂದು ಗಂಟೆಯಿರಬಹುದು. ಒಂದು ಗಂಟೆಯೊಳಗೆ ನಾವು ಯಾವುದೇ ವಿಷಯವನ್ನು ಪ್ರಸ್ತಾಪಮಾಡುವುದಕ್ಕೆ ಅನುಮತಿಬೇಕು.

ಅಧ್ಯಕ್ಷರು:- ಹೌದು.

ಶ್ರೀ ಹೆಚ್. ಏಕಾಂತಯ್ಯ:- ಪ್ರಶ್ನೋತ್ತರದ ಅವಧಿ ಏನಿದೆ ನಿಯಮ 132ರ ಪ್ರಕಾರ ಒಂದು ಗಂಟೆ ಏನಿದೆ ಅದನ್ನು ರದ್ದುಪಡಿಸಿಯೆಂದು ತಮ್ಮ ಅನುಮತಿಯನ್ನು ಕೇಳುತ್ತಿದ್ದೇವೆ.

ಅಧ್ಯಕ್ಷರು:- ನೀವು ಕೇಳುತ್ತಾ ಇದ್ದೀರಿ, ನಾನು ಒಪ್ಪುತ್ತಾ ಇಲ್ಲ ಅದಕ್ಕೆ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ:- ನಿಯಮ 344ರ ಆಧಾರದ ಮೇಲೆ ವಿಶೇಷ ಪರಿಸ್ಥಿತಿ ಇದ್ದಾಗ ಪ್ರಾಮುಖ್ಯತೆ ಇದ್ದಾಗ ಪ್ರಶ್ನೋತ್ತರ ಅವಧಿಯನ್ನು ರದ್ದುಮಾಡುವುದಕ್ಕೆ ತಮಗೆ ಅಧಿಕಾರ ಇದೆ. ತಾವು ಅನುಮತಿಯನ್ನು ಕೊಡಬೇಕು.

SRI R.V. DESHPANDE:-I humbly submit, where the 344 will be submitted.

ಇಂತಹ ಯಾವುದೇ ಉದಾಹರಣೆ ಇಲ್ಲ, ಈ ಪ್ರಕಾರ ಬಜೆಟ್ ಲೀಕ್ ಆಗಿದೆ. ಹೀಗಾಗಿ...

ಅಧ್ಯಕ್ಷರು:- ಈ ಪ್ರಕಾರವಾಗಿ ಅಚ್ಚಾಗಿರತಕ್ಕ ಎಲ್ಲಾ ರೂಲ್ಸ್‌ಗಳನ್ನು ಕೂಡ ನಾವು ಯಾವಾಗಲೂ ಆಚರಣೆಗೆ ತರಬೇಕೆಂದೇನೂ ನಿಯಮವಿಲ್ಲ, ನಿಯಮ 344 ಅದರ ಪಾಡಿಗೆ ಅದು ಇದೆ.

ಶ್ರೀ ಆರ್.ವಿ. ದೇಶಪಾಂಡೆ:- ಪ್ರಶ್ನೋತ್ತರ ವೇಳೆಯನ್ನು ಮಾಡಿದ್ದಾರೆ. ಇಂತಹ ಇನ್ಸಿಡೆಂಟ್ ಆದರೆ ಅಂತಹ ಅವಕಾಶ ಇದ್ದರೆ ತಾವು ಏತಕ್ಕೆ ರದ್ದು ಮಾಡಬಾರದು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ನಿಯಮ 344ನ್ನು ಯಾವ್ಯಾವ ಕಾಲಕ್ಕೂ ತಾವು ಉಪಯೋಗಿಸಿಲ್ಲ, ಒಂದು ಸಾರಿ ತಾವು ಉಪಯೋಗಿಸಿ. ಆದಕ್ಕೆ ಮುಖ್ಯ ಕಾರಣ ಏನೆಂದರೆ ಇಡೀದೇಶದ ಇಡೀರಾಜ್ಯದ.....

ಅಧ್ಯಕ್ಷರು:- ರೂಲ್ ಇದೆಯೆಂದು ಉಪಯೋಗಿಸಿದರೆ ಏನು ಪ್ರಯೋಜನ?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಇಂತಹ ಸಮಯದಲ್ಲೂ ಆದರ ಬಳಕೆಯಾಗದಿದ್ದರೆ ಹೇಗೆ? ನಾನು ಒಂದು ರೆಸಲ್ಯೂಷನ್ ಅನ್ನು ತಮ್ಮ ಕೈಗೆ ಕೊಟ್ಟಿದ್ದೇನೆ.

ಅಧ್ಯಕ್ಷರು:- ಅದನ್ನು ನಾನು ನೋಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ನಿಯಮ 344ನೇ ವಿಧಿಯನ್ನು ಸಸ್ಪೆಂಡ್ ಮಾಡಿ ಏನು ನಮ್ಮ ರೆಸೊಲೂಷನ್ ಎಂದು ಕೇಳಿ. ಆದರ ಮಹತ್ವ ಏನೆಂಬುದನ್ನು ನಾವು ಹೇಳುತ್ತೇವೆ. ತಮ್ಮನ್ನು ಒಪ್ಪಿಸಬೇಕು, ತಮ್ಮ ಒಪ್ಪಿಗೆ ಪಡೆಯದೆ ಮೂವ್ ಮಾಡುವುದಕ್ಕಾಗುವುದಿಲ್ಲ, ರೆಸಲೂಷನ್ ಕೊಡುವುದಕ್ಕೆ ಮುನ್ನ ತಮ್ಮ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ನನಗೆ ಇರತಕ್ಕ ಇತಿಮಿತಿಗಳನ್ನು ಹೇಳಿದ್ದೇನೆ.

ಶ್ರೀ ಆರ್.ಎನ್. ನಾಯಕ್:- ಪ್ರಶ್ನೋತ್ತರ ವೇಳೆಯನ್ನು ರದ್ದುಮಾಡಿಲ್ಲವೆಂದು ಆದೇಶ ಕೊಟ್ಟಿದ್ದೀರಿ. ನಿಮ್ಮ ಆದೇಶವನ್ನು ಉಲ್ಲಂಘಿಸುತ್ತಿದ್ದಾರೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ನಿನ್ನೆ ಶಾಸನಸಭೆಯಲ್ಲಿ ಆಗಿರತಕ್ಕತಕ್ಕ ಪ್ರಕರಣ ಏನಿದೆ ಅದು ಇಡೀ ಸದನ ತಲೆತಗ್ಗಿಸತಕ್ಕ ಕೆಲಸ. ನಾವು ಈ ಶಾಸನಸಭೆಯಲ್ಲಿ ಕೆಲಸ ಮಾಡಿರತಕ್ಕ ಕಾಲದಲ್ಲಿ ತಮ್ಮ ಅನುಮತಿಯನ್ನು ಕೇಳುತ್ತಿದ್ದೇವೆ. ತಮ್ಮನ್ನು ಒಲಿಸಿಕೊಳ್ಳುವುದಕ್ಕೆ ಅನುಮತಿಯನ್ನು ಕೊಡಿ, ಇವತ್ತಿನ ಗಂಭೀರತೆಯನ್ನು ತಿಳಿದು ಈ ರೆಸಲೂಷನ್ ಅನ್ನು ತಾವು ಮೊದಲು ಕೈಗೆ ಎತ್ತಿಕೊಳ್ಳಬೇಕು. ನಾವು ರೆಸಲ್ಯೂಷನ್‌ನಲ್ಲಿ ಬೇರೇನೂ ಹೇಳಿಲ್ಲ, ಆಫಿಶಿಯಲ್ ಸೀಕ್ರೆಟ್ ವಯಲೇಟ್ ಆಗಿದೆ 'the Finance Minister who happens to be the Chief Minister should resign ಎನ್ನುವ ಮಾತನ್ನು ಹೇಳಿದ್ದೇವೆ. ಇದು ಬಂದದ್ದು ಯಾವಾಗ? ಬ್ರಿಟನ್‌ನ ಎರಡು ಪ್ರಕರಣಗಳನ್ನು ತಾವು ಹೇಳಿದ್ದೀರಿ. ಇದು ಪ್ರಿವಿಲೇಜ್ ಆಗುವುದಿಲ್ಲ ಎನ್ನತಕ್ಕ ಮಾತನ್ನು ಸೂಚ್ಯವಾಗಿ ತಾವು ಹೇಳಿದ್ದೀರಿ. ಅಲ್ಲಿಂದ ಮುಂದೆ ಏನು ನಡೆದಿದೆ ಈ ರಾಜ್ಯದಲ್ಲಿ, ಈ ದೇಶದಲ್ಲಿ lock, stock and barrel, we have almost agreed to the conventions laid down by the House of Commons. (Interruptions). If we are following the conventions of the House of Commons, let us forget the rules, proceedures and other technical aspects. But the convention of the House of Commons is, the moment the Finance Minister or the Chancellor of Exchequer submitted to the will or the conscience of the House and tendered his resignations for the office he held.

ಇಷ್ಟು ದೊಡ್ಡ ಕರ್ತವ್ಯ ನಿರ್ವಹಣೆಯನ್ನು ಮಾಡತಕ್ಕಂಥ ಅವಕಾಶ ಇವತ್ತು ನಮ್ಮ ರಾಜ್ಯದ ಮುಖ್ಯಮಂತ್ರಿಗಳಿಗೆ ಬಂದಿದೆ. ಏತಕ್ಕೆ ಅವರು ತಪ್ಪಿಸಿಕೊಳ್ಳುತ್ತಾರೋ ಎಂದು ಗೊತ್ತಾಗುತ್ತಿಲ್ಲ, ಆ ಕಾರಣ ಈ ರೆಸಲ್ಯೂಷನ್ ಕಳಿಸಿದ್ದೇನೆ. ನಾನು ಆಫಿಶಿಯಲ್ ಸಿಕ್ರೆಸಿ ಆಕ್ಟ್ ಅನ್ನು ಕೂಡ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು :- ಅಫಿಶಿಯಲ್ ಸಿಕ್ರೆಸಿ ಆಕ್ಟನ್ನು ಓದುವುದಕ್ಕೆ ನಿಮಗೆ ನಾನು ಅವಕಾಶ ಕೊಡುತ್ತೇನೆ. ಈಗ 344ನೇ ನಿಯಮವನ್ನು ತತ್‌ಕ್ಷಣ ಆಚರಣೆಗೆ ತಂದು ಸಭೆಯ ಮುಂದೆ ಇರತಕ್ಕಂಥ ಇತರ ಎಲ್ಲಾ ಕಾರ್ಯಕಲಾಪಗಳನ್ನು ಬದಿಗೊತ್ತಿ, ಅವರು ಕಳಿಸಿರತಕ್ಕ ಅಂದರೆ ವಿರೋಧ ಪಕ್ಷದ ನಾಯಕರು ಏನು 145ನೇ ನಿಯಮದ ಅಡಿಯಲ್ಲಿ ಪ್ರಸ್ತಾವನೆಯನ್ನು ಜರೂರಾಗಿ ಸದನದ ಮುಂದೆ ಚರ್ಚೆಗೆ ಸ್ವೀಕಾರ ಮಾಡಬೇಕೆಂದು ಹೇಳಿ ಮನವಿ ಮಾಡಿದ್ದಾರೆ, ಆ ವಿಷಯದ ಗುಣ ಅವಗುಣಗಳ ಬಗ್ಗೆ ಅವಕಾಶ ಕೊಡದೆ, ನಾನು ವಿಷಯದಲ್ಲಿ ಸಾಕಾದಷ್ಟು ಚರ್ಚೆಗೆ ಅವಕಾಶ ಇದೆ, ವಿಷಯದಲ್ಲಿ ಸಾಕಾದಷ್ಟು ಮಹತ್ವವಿದೆ ಎಂದು ಭಾವಿಸಿದ್ದು, ಸದನ ಇದರ ಬಗ್ಗೆ ತನ್ನ ಅನಿಸಿಕೆಗಳನ್ನು ಹೇಳುವುದಕ್ಕೆ ಅವಕಾಶ ಕೊಡಬೇಕು ಎನ್ನತಕ್ಕದ್ದು ನನ್ನ ಉದ್ದೇಶ. ಆದರೆ ಈ ದಿವಸದ ಸದನದ ಕಾರ್ಯಕಲಾಪಗಳ ಪಟ್ಟಿಯಲ್ಲಿ ನಮೂದಿತವಾಗಿರತಕ್ಕಂಥ ರೀತಿಯಲ್ಲಿ ಪ್ರಶ್ನೋತ್ತರ ವೇಳೆ ಮುಗಿದಮೇಲೆ ನಾನು ನಿಮ್ಮನ್ನು ಕರೆಯುತ್ತೇನೆ. ಆಗ ತಮ್ಮ ಎಲ್ಲಾ ಅನಿಸಿಕೆಗಳನ್ನು ಸುದೀರ್ಘವಾಗಿ ಸದನದ ಮುಂದಿಡುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :-ಮಾನ್ಯ ಅಧ್ಯಕ್ಷರೇ, ಅತ್ಯಂತ ಗೌರವದಿಂದ ತಾವು ಕೊಟ್ಟಿರತಕ್ಕಂಥ ನಿರ್ಣಯವನ್ನು ನಾನು ಪರಿಪಾಲನೆ ಮಾಡುತ್ತೇನೆ. ಆದರೆ ಇದು ಆಯವ್ಯಯ ಅಧಿವೇಶನ, ನಾವು ಒಟ್ಟಿಗೆ ಇದನ್ನು ಬಜೆಟ್ ಅಧಿವೇಶನ ಎಂದು ಕರೆದಿದ್ದೇವೆ. ಈ ಅಧಿವೇಶನ ತನ್ನ ಪಾವಿತ್ರ್ಯತೆಯನ್ನು ಕಳೆದುಕೊಂಡು ಬಿಟ್ಟಿದೆ. ಸರ್ಕಾರ ತನ್ನ ಕರ್ತವ್ಯದಲ್ಲಿ ಲೋಪ ಮಾಡಿದೆ, ಗೋಪ್ಯತೆಯನ್ನು ಕಾಪಾಡುವುದರಲ್ಲಿ ವಿಫಲವಾಗಿದೆ. ಅದನ್ನು ಗಂಭೀರವಾಗಿ ಸರ್ಕಾರ ಒಪ್ಪಿಕೊಳ್ಳಬಹುದಿತ್ತು, ಆದರೆ ಸರ್ಕಾರ ಹಾಗೆ ಒಪ್ಪಿಕೊಳ್ಳುವುದಕ್ಕೆ ಸಿದ್ಧವಿಲ್ಲ, ಆದ್ದರಿಂದ ನಾನು ಈ ಬಜೆಟ್ ಅಧಿವೇಶನದಲ್ಲಿ ಪಾಲ್ಗೊಳ್ಳಬೇಕೇ, ಬೇಡವೇ ಎನ್ನುವ ನಿರ್ಣಯವನ್ನು ಮುಂದೆ ಮಾಡುತ್ತೇನೆ. ತಮ್ಮ ಅಭಿಪ್ರಾಯಕ್ಕಾಗಿ ನಾವು ಕಾಯುತ್ತೇವೆ. ಅಲ್ಲಿಯವರೆಗೆ ನಾನು ಮತ್ತು ನಮ್ಮ ಸದಸ್ಯರು. ಈ ಸಭೆಯಲ್ಲಿ ನಾವು ಕುಳಿತುಕೊಳ್ಳುವುದಕ್ಕೆ ಅಸಾಧ್ಯವಾಗುತ್ತದೆ. ಅದಕ್ಕಾಗಿ ತಮ್ಮ ಕ್ಷಮೆ ಕೋರಿ ಹೊರಗೆ ಹೋಗುತ್ತೇವೆ.

(ಜನತಾದಳ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೇ, ಈಗಲೂ ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ಈ ಪ್ರಶ್ನೋತ್ತರ ಕಾಲವನ್ನು ಬದಿಗೊತ್ತಿ ನಿನ್ನೆ ನಡೆದಿರತಕ್ಕಂಥ ಘಟನೆಯಿಂದ ಏನು ಕಳಂಕ ತರತಕ್ಕಂಥ ಪರಿಸ್ಥಿತಿ ಬಂದಿದೆ...

(ಗೊಂದಲ)

ಶ್ರೀ ಆರ್.ಎನ್. ನಾಯಕ್:- ತಾವು ರೂಲಿಂಗ್ ಕೊಟ್ಟಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:- ಈ ಸದನದ ಸಂಪ್ರದಾಯವನ್ನು ಎತ್ತಿಹಿಡಿಯುವುದರಲ್ಲಿ ತಾವು ಬಹಳ ಪ್ರಮುಖರಾಗಿದ್ದೀರಿ. ತಮ್ಮ ಬಗ್ಗೆ ನನಗೆ ಅಪಾರವಾದ ಗೌರವ ಇದೆ.

(ಗೊಂದಲ. ಅನೇಕ ಜನ ಸದಸ್ಯರು ಏಕಕಾಲದಲ್ಲಿ ಎದ್ದುನಿಂತು ಮಾತನಾಡಲು ಪ್ರಾರಂಭಿಸಿದರು)

ಶ್ರೀ ಎಸ್. ರಮೇಶ್:- ಅಧ್ಯಕ್ಷರು ರೂಲಿಂಗ್ ಕೊಟ್ಟಮೇಲೆ ಮಾತನಾಡುವುದಕ್ಕೆ ಅವಕಾಶ ಇದೆಯೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನಾನು ತಮ್ಮ ತೀರ್ಪನ್ನು ಪ್ರಶ್ನೆ ಮಾಡುತ್ತಿಲ್ಲ, ದಯವಿಟ್ಟು ಅವಕಾಶ ಕೊಡಿ ಎಂದು ಮನವಿ ಮಾಡುತ್ತಿದ್ದೇನೆ. ನಾವು ತಮ್ಮ ತೀರ್ಪಿಗೆ ಅವಮಾನ ಮಾಡಿ ಆದರ ವಿರುದ್ಧ ಸಭಾತ್ಯಾಗ ಮಾಡುತ್ತಿಲ್ಲ. ಒಂದು ಸಂಪ್ರದಾಯವನ್ನು ನಿನ್ನೆ ದಿವಸ ಇಲ್ಲಿ ಗಾಳಿಗೆ ತೂರಿದ್ದರಿಂದ, ಈ ಸರ್ವೋಚ್ಚ ಸಭೆಯ ಘನತೆ, ಗಾಂಭೀರ್ಯ ಇದು ನಿನ್ನೆ ಹಾಳಾಗಿದೆ. ದಯವಿಟ್ಟು ತಾವು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಇದರಿಂದ ಹೊರಗಡೆ ಇರತಕ್ಕಂಥ ಎಲ್ಲರೂ ಭಾಗವಹಿಸುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ ಅವಕಾಶ ಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ.

ಅಧ್ಯಕ್ಷರು:- ಪ್ರಶ್ನೋತ್ತರ ಕಾಲ ಆದ ತಕ್ಷಣ ನಾನು ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ನಾನು ನಿಮ್ಮ ತೀರ್ಪನ್ನು ಪ್ರತಿಭಟಿಸುತ್ತಾ ಇಲ್ಲ, ನಿನ್ನೆ ನಡೆದಂಥ ಪ್ರಸಂಗ ನಿಜವಾಗಿಯೂ, ಇಡೀ ದೇಶಕ್ಕೆ, ರಾಜ್ಯಕ್ಕೆ ಕಳಂಕ ತರತಕ್ಕಂಥಾದ್ದು. ಆದುದರಿಂದ ನಾನು ಈ ಸಭೆಯನ್ನು ಬಹಿಷ್ಕರಿಸಿ

ಹೊರಗೆ ಹೋಗುತ್ತೇನೆ. ಮಾನ್ಯ ಮಂತ್ರಿಗಳು ಏನು ಹೇಳುತ್ತಿದ್ದಾರೆಂದರೆ, ನಾನು ಮಾನ್ಯ ಅಧ್ಯಕ್ಷರ ತೀರ್ಪನ್ನು ವಿರೋಧ ಮಾಡುತ್ತಿಲ್ಲ. ನಿಮ್ಮ ಸರ್ಕಾರ ಮಾಡಿರತಕ್ಕ ಅನ್ಯಾಯ, ನಿಮ್ಮ ಸರ್ಕಾರ ಮಾಡಿರುತಕ್ಕ ಘೋರ ಅಪಚಾರ, ಈ ಸಭೆಗೆ ಮಾಡಿರತಕ್ಕಂಥ ಅಗೌರವ ಏನಿದೆ, ಅದಕ್ಕಾಗಿ ವಿರೋಧ ಮಾಡುತ್ತೇನೆಯೇ ಹೊರತು, ಅಧ್ಯಕ್ಷರ ತೀರ್ಪನ್ನು ನಾನು ವಿರೋಧ ಮಾಡುತ್ತಿಲ್ಲ. ಈ ಸಭೆಗೆ ಅಗೌರವವಾಗಿದೆ. ಈ ಸಭೆಯ ಘನತೆ ಹಾಳಾಗಿದೆ. ಅಯವ್ಯಯ ಬಹಿರಂಗವಾಗಿ ಜಗಜ್ಜಾಹೀರಾಗಿದೆ ಎಂಬುದು ನಮ್ಮ ಅತ್ಯಂತ ಪ್ರಾಮಾಣಿಕ ಚಿಂತನೆ. ಈ ಸಭೆಗೆ ಈ ಸರ್ಕಾರ ಮಾಡಿರತಕ್ಕ ಅಗೌರವನ್ನು ಪ್ರತಿಭಟಿಸಿ, ನಾನು ಈ ಸಭೆಯನ್ನು ಬಹಿಷ್ಕರಿಸಿ, ಹೊರಗೆ ಹೋಗುತ್ತಿದ್ದೇನೆ.

(ಶ್ರೀಯುತ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಇವತ್ತಿನ ಪ್ರಶ್ನೋತ್ತರ ಪಟ್ಟಿಯಲ್ಲಿ ಮೊದಲನೇ ಪ್ರಶ್ನೆ ಇರತಕ್ಕಂಥಾದ್ದು ಬೇಡ್ತಿ ಯೋಜನೆಗೆ ಸಂಬಂಧಪಟ್ಟ ವಿಚಾರ. ಇದಕ್ಕೆ ಅಪಾರವಾದ ಹಣ ಖರ್ಚಾಗುತ್ತದೆ, ಇಷ್ಟು ಹಣ ಖರ್ಚಾಗಬೇಕಾಗಿದ್ದರೆ, ಇದಕ್ಕೆ ಬರತಕ್ಕಂಥಾದ್ದು ಮೂಲ ಬಜೆಟ್. ಈ ಬಜೆಟ್‌ಗೆ ಏನು ಮೌಲ್ಯ ಇರಬೇಕಾಗಿತ್ತೋ, ಅದು ಹೋಗಿದೆ. ಬಹಳ ಯಶಸ್ವಿಯಾಗಿ ನಿನ್ನೆಯೇ ಹಾಳಾಗಿದೆ. ಈ ರೀತಿ ಆಗಿರತಕ್ಕಂಥ ಲೋಪವನ್ನು ಒಪ್ಪಿ, ಲೋಪ ಆಗಿದೆ ಎನ್ನುವುದನ್ನು ಗಮನಿಸಿ, ಕರ್ನಾಟಕ ಜನತೆಯ ಕ್ಷಮೆಯನ್ನು ಕೇಳಬೇಕಾಗಿತ್ತು, ಆ ಕೆಲಸವನ್ನು ಮಾಡಲಿಲ್ಲ, ಅದಕ್ಕೆ ಪಟ್ಟುಹಿಡಿದು ಇವತ್ತಿನದಿವಸ ಈ ಸದನದ ಕಲಾಪಗಳನ್ನು ಮುಂದುವರಿಸಬೇಕೆಂಬ ಪ್ರಯತ್ನದಲ್ಲಿ ಸರ್ಕಾರ ಮುಂದಾಗುತ್ತಿದೆ. ತಾವೂ ಕೂಡ ಸರ್ಕಾರಕ್ಕೆ ಕಿವಿ ಮಾತನ್ನು ಹೇಳಬೇಕಾದ್ದು ಅವಶ್ಯಕತೆ ಇದೆ. ಇವತ್ತು ಆಫೀಷಿಯಲ್ ಸೀಕ್ರೆಟ್ ಆಕ್ಟ್ ಏನಿದೆ, ಅದೂ ಕೂಡ ಉಲ್ಲಂಘನೆಯಾಗಿದೆ. ನಾವು ಸದನದಲ್ಲಿ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ ಪ್ರಮಾಣವಚನ ಸ್ವೀಕಾರ ಮಾಡುತ್ತೇವೆ, ಮಂತ್ರಿಗಳಾಗುವುದಕ್ಕೆ ಮೊದಲು ಏನು ಪ್ರಮಾಣವಚನ ಸ್ವೀಕಾರ ಮಾಡುತ್ತೇವೆ, ಆ ಪ್ರಮಾಣ ವಚನ ಸ್ವೀಕಾರ ಮಾಡುವುದಕ್ಕೆ ವಿರುದ್ಧವಾದ ಕೆಲಸ ನಡೆದಿದೆ.

(ಗೊಂದಲ)

ಅಧ್ಯಕ್ಷರು:- ನಿಮಗೆ ಪ್ರಶ್ನೋತ್ತರ ಕಾಲ ಆದನಂತರ ಅವಕಾಶ ಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ:- ಇದು ಸರ್ಕಾರದ ಆಕ್ರಮವಾಗುತ್ತಿದೆ, ಏನು ನಡೆದರೂ ಆಕ್ರಮವಾಗಿದೆ. ಆಕ್ರಮ ವ್ಯವಹಾರಗಳನ್ನು ಈ ಸರ್ಕಾರ ನಡೆಸುವುದಕ್ಕೆ ಮುಂದಾಗಿದೆ. ಆದುದರಿಂದ ಇವತ್ತಿನದಿವಸ ಈ ಸಭೆಯನ್ನು ಅನಿವಾರ್ಯವಾಗಿ ಬಹಿಷ್ಕರಿಸಿ ಹೋಗಬೇಕಾಗಿದೆ. ತಮ್ಮ ತೀರ್ಪಿನ ವಿರುದ್ಧ ಅಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

(ಸಮಾಜವಾದಿ ಜನತಾ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಸನ್ಮಾನ್ಯ ಸಭಾಧ್ಯಕ್ಷರೇ, ತಮ್ಮಲ್ಲಿ ಒಂದು ಪ್ರಾರ್ಥನೆ. ಆ ಪ್ರಶ್ನೆ ಮಾಡುವುದಕ್ಕೆ ಮುಂಚೆ, ಈ ಸದನದ ಸದಸ್ಯರೆಲ್ಲರಿಗೂ ಗೊತ್ತಿದೆ. ನಾನು ಯಾವುದೇ ವಿಷಯವನ್ನು ಚರ್ಚೆ ಮಾಡಿದರೂ, ಅದರಲ್ಲಿ ರಾಜಕೀಯ ಬೆರೆಸುವುದಿಲ್ಲ ಎಂದು. ಈ ವಿಷಯದಲ್ಲಿಯೂ ನಾನು ರಾಜಕೀಯ ಬೆರೆಸುತ್ತಾ ಇಲ್ಲ. ಕಾನೂನುಮಂತ್ರಿಗಳು ಬಜೆಟ್ ಮಂಡನೆಯಾಗಿದೆ, ಆಗಲೇ ಮಂಡನೆಯಾಗಿದೆ ಎಂದು ಹೇಳಿದರು. ತಮ್ಮ ಮೂಲಕ ಕಾನೂನು ಮಂತ್ರಿಗಳನ್ನು ಕೇಳುವುದು. Whether this Booklet when it became a public document much earlier than the pronouncement by the Finance Minister on the floor of the House can be called as a Budget...

ಸನ್ಮಾನ್ಯ ಸಭಾಧ್ಯಕ್ಷರೇ, ತಾವು ನಿನ್ನೆ ಅಪ್ಪಣೆ ಕೊಡಿಸಿದ್ದನ್ನೇ ನಾನು ಹೇಳುತ್ತಿದ್ದೇನೆ.

ತಾವು ಅಪ್ಪಣೆ ಕೋಡಿಸಿದ್ದೀರಿ. There is a prima facie case of leakage... It is recorded...

(ಗೊಂದಲ)

ತಾವು ಮಧ್ಯೆ ಮಧ್ಯೆ ಪ್ರವೇಶ ಮಾಡದಿದ್ದರೆ ಏನಾದರೂ ಒಂದು ಅರ್ಥಪೂರ್ಣವಾದ ಚರ್ಚೆ ಮಾಡಬಹುದು. ಇಲ್ಲಿ ಚರ್ಚೆ ಬೇಡ ಎಂದರೆ ಹಾಗೆಯೇ ಹೋಗಿಬಿಡುತ್ತೇವೆ. ಏತಕ್ಕೆಂದರೆ ಇದು ನಮ್ಮೆಲ್ಲರ ಘನತೆ ಗೌರವಕ್ಕೆ ಸಂಬಂಧಪಟ್ಟ ಪ್ರಶ್ನೆ. ಒಂದು ಕೆಟ್ಟ ಸಂಪ್ರದಾಯವನ್ನು ನಾವು ಇಲ್ಲಿ ಬೆಳೆಸಬಾರದು. ಒಳ್ಳೆಯ ಸಂಪ್ರದಾಯವನ್ನು ಬೆಳೆಸುವುದಕ್ಕೆ ಆದಷ್ಟು ಪ್ರಯತ್ನ ಮಾಡಬೇಕೊ ಬೇಡವೋ?

ಶ್ರೀ ಎಸ್. ರಮೇಶ್ (ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವರು):- ಆದರ ಬಗ್ಗೆ ಪ್ರಶ್ನೆ ಇಲ್ಲ. ಅಧ್ಯಕ್ಷರು ರೂಲಿಂಗ್ ಕೊಟ್ಟಿದ್ದಾರೆ. ಪ್ರಶ್ನೋತ್ತರ ನಡೆಯಲಿ ಎಂದು ಹೇಳಿದ್ದಾರೆ. ನೀವು ಎತ್ತಿರುವ ಪ್ರಶ್ನೆ ಮುಖ್ಯವೋ ಅಧ್ಯಕ್ಷರ ರೂಲಿಂಗ್ ಮುಖ್ಯವೋ.

(ಗೊಂದಲ)

ಪ್ರೊ.ಎಂ.ಡಿ. ನಂಜುಂಡಸ್ವಾಮಿ:- ಅಲ್ಲಿಗೇ ಬರುತ್ತಿದ್ದೇನೆ. ತಾವು ಏತಕ್ಕೆ ಅವಸರ ಬೀಳುತ್ತಿದ್ದೀರಿ. ಪ್ರಶ್ನೋತ್ತರ ಎಂದರೆ ಏನು it is an official business. Is it not?

(ಗೊಂದಲ)

ಶ್ರೀ ಆರ್.ಎನ್. ನಾಯಕ್:- ಒಂದು ಸಲ ಒಬ್ಬರಿಗೆ ರೂಲಿಂಗ್ ಕೊಟ್ಟಮೇಲೆ ಅದು ಎಲ್ಲರಿಗೂ ಅಪ್ಲೈ ಆಗುತ್ತದೆಯೋ ಆಗುವುದಿಲ್ಲವೋ? ವಿರೋಧ ಪಕ್ಷದ ನಾಯಕರು ಒಂದು ಅಭಿಪ್ರಾಯ ಮಂಡಿಸಿದರು, ಆದರ ಮೇಲೆ ರೂಲಿಂಗ್ ಬಂತು ಅದು ಎಲ್ಲರಿಗೂ ಅಪ್ಲೈ ಆಗುತ್ತದೆಯೇ ಇಲ್ಲ ಕೆಲವರಿಗೆ ಅಪ್ಲೈ ಆಗುವುದಿಲ್ಲವೋ ಎಂಬುದನ್ನು ತಾವೇ ಹೇಳಬೇಕು ಅಧ್ಯಕ್ಷರೇ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಇಲ್ಲಿ ಅರ್ಥಪೂರ್ಣವಾದ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ ಎಂದು ಕಾಣುತ್ತದೆ ಅಧ್ಯಕ್ಷರೆ.

ಶ್ರೀ ಕೆ. ಹರ್ಷಕುಮಾರ್ ಗೌಡ:- ಪ್ರೊಫೆಸರ್‌ರವರೇ I have got highest regards to you.

ಇಡೀ ಸದನ ಅಧ್ಯಕ್ಷರ ರೂಲಿಂಗ್‌ನ್ನು ಪಾಲಿಸಬೇಕು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಸಂಪ್ರದಾಯದ ಬಗ್ಗೆ ಗೌರವ ಬೆಳೆಸಿಕೊಳ್ಳಿ.

ಶ್ರೀ ಕೆ. ಹರ್ಷಕುಮಾರ್ ಗೌಡ:- ಅಧ್ಯಕ್ಷರೇ ತಾವು ಕೇಳಬೇಕಾಗುತ್ತದೆ. ಇಲ್ಲಿ ಒಬ್ಬೊಬ್ಬರು ಒಂದೊಂದು ತರಹ ಹೇಳುವುದಲ್ಲ, ಅಧ್ಯಕ್ಷರ ರೂಲಿಂಗನ್ನು ಎಲ್ಲರೂ ಪಾಲಿಸಬೇಕು

(ಗೊಂದಲ)

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಯಾರಾದರೂ ಮಾತನಾಡುವಾಗ ನಾನು ಮಧ್ಯೆ ಮಾತನಾಡಿರುತ್ತೇನೆಯೇ? ನಾನು ನಿಮಗೆಲ್ಲಾ ಎಷ್ಟು ಗೌರವ ಕೋಡುತ್ತೇನೋ ಅಷ್ಟೇ ಗೌರವ ತಾವೂ ಕೊಡಬೇಕು.

(ಗೊಂದಲ)

ಅಧ್ಯಕ್ಷರು:- ಕರಿಯಣ್ಣನವರೇ, ಪರಿಸ್ಥಿತಿಯ ಸೂಕ್ಷ್ಮತೆಯನ್ನು ನೀವು ಗಮನಿಸದೇ ಹೋದರೆ.....

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಸಭಾಧ್ಯಕ್ಷರೇ, ತಮ್ಮ ಮೂಲಕ ಇನ್ನೊಂದು ವಿನಂತಿ ಮಾಡಿಕೊಳ್ಳಬೇಕು. ನಾನು ಇವರುಗಳಿಗೆ ಎಷ್ಟು ಗೌರವ ಕೊಡುತ್ತೇನೆಯೋ ಅವರು ಮಾತನಾಡುವಾಗ, ಆ ಗೌರವವನ್ನು ಇವರೂ ನನಗೆ ಕೊಡಬೇಕೋ ಬೇಡವೋ? ಅಷ್ಟೊಂದು ಕನಿಷ್ಠ ನಡತೆ ಇಲ್ಲದಿದ್ದರೆ ಸದನದ ಗೌರವವನ್ನು ಹೇಗೆ ಕಾಪಾಡುತ್ತಾರೋ ನನಗೆ ಗೋತ್ತಾಗುವುದಿಲ್ಲ, ಅಲ್ಲಿಗೇ ಬರುತ್ತಿದ್ದೇನೆ. ಪ್ರಶ್ನೋತ್ತರಕ್ಕೇ ಬರುತ್ತಿದ್ದೇನೆ. ಪ್ರಶ್ನೋತ್ತರವನ್ನು ನಾವು ಆಫಿಷಿಯಲ್ ಬಿಸಿನೆಸ್ ಎಂದು ಕರೆಯುತ್ತೇವೆ. ತಮ್ಮ ಹೇಳಿಕೆಯಿಂದಲೇ ನಾನು ಮುಂದುವರಿಯುತ್ತೇನೆ. There is a prima facie case of leakage. There is violation of the Official Secrets Act and violation of the oath of secrecy... ಅಲ್ಲಿಗೆ ಈ ಸಹಕಾರ ಮುಂದುವರಿಯುವುದಕ್ಕೆ ಇರುವಂತಹ ನೈತಿಕ ಹಕ್ಕನ್ನು ಕೇಳುತ್ತಿಲ್ಲ, ಕಾನೂನಿನ ಅಡಿಯಲ್ಲಿಯೇ ಆ ಹಕ್ಕು ಕಳೆದುಕೊಂಡಿದೆ. It is not that the Finance Minister who happens to be the Chief Minister should resign. The entire Government should resign if you have any morality left in you. That is why I am walking out ever before the Question Hour, because these Ministers have lost moral right.. to continue...

ನಮಸ್ಕಾರ.

(ರೈತ ಸಂಘದ ಸದಸ್ಯರಾದ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಮತ್ತು ಶ್ರೀ ಬಾಬಾಗೌಡ ಪಾಟೀಲ್ ಅವರುಗಳು ಸಭಾತ್ಯಾಗ ಮಾಡಿದರು)

ಶ್ರೀ ಎ. ರುಕ್ಮಯ್ಯ ಪೂಜಾರಿ:- ಇದು ಬಹಳ ಪ್ರಾಮುಖ್ಯವಾದ ವಿಚಾರ. ನಮಗೆ ಗೊತ್ತಿರುವಹಾಗೆ ಇಷ್ಟರವರೆಗೆ ಬಜೆಟನ್ನು ಮಂಡನೆ ಮಾಡುವ ಮೊದಲೇ ಅದು ಲೀಕೌಟ್ ಆಗಿರಲಿಲ್ಲ. ಇವತ್ತು ಆಗಿದೆ.

(ಗೊಂದಲ)

ಶ್ರೀ ಆರ್.ಎನ್. ನಾಯಕ್:- ತಾವು ಒಂದು ಅಭಿಪ್ರಾಯ ಕೊಟ್ಟರೆ ಅದು ಎಲ್ಲರಿಗೂ ಅಪ್ಲೈ ಆಗುತ್ತದೋ ಇಲ್ಲವೋ ಎಂಬುದನ್ನು ತಾವು ಹೇಳಬೇಕು ಅಧ್ಯಕ್ಷರೇ, ಅದು ಇವರಿಗೆಲ್ಲಾ ಅಪ್ಲೈ ಆಗುತ್ತದೋ ಇಲ್ಲವೋ.

ಶ್ರೀ ಎ. ರುಕ್ಮಯ್ಯ ಪೂಜಾರಿ:- ಆದುದರಿಂದ ಇವತ್ತು ಇದರ ಪಾವಿತ್ರ್ಯತೆ ಹೊರಟು ಹೋಗಿದೆ.

(ಗೊಂದಲ)

ಶ್ರೀ ಆರ್.ಎನ್. ನಾಯಕ್:- ಒಬ್ಬೊಬ್ಬರೂ ಈ ರೀತಿ ಹೇಳುತ್ತಾ ಹೋದರೆ ಹೇಗೆ?

ಶ್ರೀ ಎ. ರುಕ್ಮಯ್ಯ ಪೂಜಾರಿ:- ಆದುದರಿಂದ ಇದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಭಾರತೀಯ ಜನತಾಪಕ್ಷದ ಸದಸ್ಯರುಗಳಾದ ಶ್ರೀ ರುಕ್ಮಯ್ಯ ಪೂಜಾರಿ ಹಾಗೂ ನಾರಾಯಣರಾವ್ ಮನಹಳ್ಳಿ ಇವರುಗಳು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು:- ಡಾ. ನಂಜಪ್ಪ.

ಡಾ. ಎನ್.ಬಿ. ನಂಜಪ್ಪ:- ಪ್ರೊಫೆಸರ್ ನಂಜುಂಡಸ್ವಾಮಿಯವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಬಜೆಟನ್ನು ಇಟ್ ಈಸ್ ಎ ಸ್ಕ್ಯಾಪ್ ಆಫ್ ಪೇಪರ್ ಎಂದು ಹೇಳಿದರು.

ಅಧ್ಯಕ್ಷರು:- ಪ್ರಶ್ನೋತ್ತರ ಕಾಲ ಆದಮೇಲೆ ನಿಮಗೆ ಅವಕಾಶ ಕೊಡುತ್ತೇನೆ. ಅವರಿಗೆ ಏನು ಹೇಳಿದ್ದೇನೆ, ನಿಮಗೂ ಅದನ್ನೇ ಹೇಳುತ್ತೇನೆ.

ಡಾ. ಎನ್.ಬಿ. ನಂಜಪ್ಪ:- ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಇದು ಸ್ಕ್ಯಾಂಕ್ಷಿಟಿ ಕಳೆದುಕೊಂಡಿದೆ.

ಅಧ್ಯಕ್ಷರು:- ಪರಿಸ್ಥಿತಿಯ ಸೂಕ್ಷ್ಮತೆ ಎಂದು ನಾನು ಬಹಳ ಸೂಕ್ಷ್ಮವಾಗಿ ಹೇಳಿದೆ. ಈಗ ಪ್ರಶ್ನೋತ್ತರ. ಉಮೇಶ್ ಭಟ್.

ಪ್ರಶ್ನೋತ್ತರ

(ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು)

ಬೇಡ್ತಿ ಜಲ ವಿದ್ಯುತ್ ಯೋಜನೆ

121(606) ಶ್ರೀ ಕೆ. ಉಮೇಶ್ ಭಟ್ (ಅಂಕೋಲ):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಬೇಡ್ತಿ ಜಲವಿದ್ಯುತ್ ಯೋಜನೆಯ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವೇನು? ಹಾಗೂ ಈ ಯೋಜನೆಯ ಬಗ್ಗೆ ನಿರ್ದಿಷ್ಟ ನಿಯಮ ನಿರ್ಣಯಗಳೇನು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):-

ಅ) ಸರ್ಕಾರವು ಬೇಡ್ತಿ ಯೋಜನೆಯ ಕೆಲಸಗಳನ್ನು ಪೂರ್ಣಜಲಾಶಯ ಮಟ್ಟವನ್ನು 1540 ಅಡಿಗೆ ಇಳಿಸಿ, ಪರಿಸರ ಸಂರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಯೋಜನೆಯನ್ನು ಪುನರಾರಂಭಿಸಲು ಆದೇಶಿಸಿದೆ. ಪೂರ್ಣ ಜಲಾಶಯ ಮಟ್ಟವನ್ನು ಕಡಿಮೆಗೊಳಿಸಿ ಪರಿಷ್ಕೃತ ವಿವರವಾದ ಯೋಜನಾ ವರದಿಯನ್ನು ಮುಂದಿನ ಕ್ರಮಕ್ಕಾಗಿ ತಯಾರು ಮಾಡಲಾಗುತ್ತಿದೆ.

ಶ್ರೀ ಕೆ. ಉಮೇಶ್‌ಭಟ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೊಟ್ಟಿರುವ ಈ ಉತ್ತರ ನನಗೆ ಅಷ್ಟು ತೃಪ್ತಿಕರವಾಗಲಿಲ್ಲ. ಕಾರಣವೇನೆಂದರೆ ಈ ನಿರ್ಣಯ ಬಂದು ಆದನ್ನು ತಡೆಗಟ್ಟಲು ಕಾರಣವೇನೋ ಗೊತ್ತಿಲ್ಲ. ಇದು ಯಾವಾಗ ಮುಗಿಯುತ್ತದೆ? ಎನ್ನತಕ್ಕಂಥ ವಿಚಾರ ಕೂಡ ಇದರಲ್ಲಿ ಇಲ್ಲ. ಅಲ್ಲಿನ ಜನರ ಕೂಗು ಸರ್ಕಾರಕ್ಕೆ ಮುಟ್ಟಿದೆಯೋ ಇಲ್ಲವೋ ಎನ್ನುವ ವಿಚಾರ ಇಲ್ಲ. ಇದನ್ನು ಮಾನ್ಯ ಮಂತ್ರಿಗಳು ದಯಮಾಡಿ ವಿವರಿಸುತ್ತಾರೆಂದು ನಾನು ನಂಬಿದ್ದೇನೆ.